ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 :** **ದಿನಾಂಕ: 16–4–2015**

# ಪತ್ರಿಕಾ ಆಮಂತ್ರಣ

| | | | |
|---|---|---|---|
| 1. | **Workshop on Sustainable Urban Planning for Smart Cities in Karnataka**<br><br>**Inauguration:**<br><br>**Shri Vinay Kumar Sorake, Minister for Urban Development**<br><br>**Presided by:**<br><br>**Dr. Qamarul Islam, Minister for Municipal Administration**<br><br>**Chief Guest:**<br>**Shri Kaushik Mukherjee, Chief Secretary, Government of Karnataka** | **17-4-2015**<br><br>**Friday**<br><br>**at**<br><br>**10.00 A.M.** | **Room No. 419,**<br><br>**4th Floor,**<br><br>**Vikasa Soudha, Bengaluru** |
| 2 | ಪತ್ರಿಕಾಗೋಷ್ಠಿ:<br>ಆಯುಕ್ತರು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ<br>ಬೃಹತ್ ಬೆಂಗಳೂರು ಮಹಾನಗರಪಾಲಿಕೆ –2015 ರ ಸಾರ್ವತ್ರಿಕ ಚುನಾವಣೆ ಕುರಿತು | **17-04-2015**<br>ಶುಕ್ರವಾರ<br>ಸಂಜೆ<br>3–00 ಗಂಟೆಗೆ | ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡದ ಹಿಂಭಾಗ,<br>ನಂ. 8 ಕನ್ನಿಂಗ್‌ಹ್ಯಾಂ ರಸ್ತೆ,<br>ಬೆಂಗಳೂರು–560 052 |
| ೩ | ಮನೆಯಂಗಳದಲ್ಲಿ ಮಾತುಕತೆ, ಸಾಂಸ್ಕೃತಿಕ ಕಾರ್ಯಕ್ರಮ :<br><br><u>ತಿಂಗಳ ಅತಿಥಿ:</u> | **17-04-2015**<br>ಶುಕ್ರವಾರ<br>ಸಂಜೆ | ನಯನ ಸಭಾಂಗಣ,<br>ಕನ್ನಡ ಭವನ, ಜೆ.ಸಿ. ರಸ್ತೆ,<br>ಬೆಂಗಳೂರು |

| | | | |
|---|---|---|---|
| | ಡಾ. ಎಂ. ಮೋಹನ ಆಳ್ವ,<br>ಸಾಂಸ್ಕೃತಿಕ ಸಂಘಟಕರು – ವೈದ್ಯರು | 4–00 ಗಂಟಗೆ | |

ಪತ್ರಿಕಾ ಪ್ರಕಟಣೆ

# ಕರ್ನಾಟಕ ವಿಧಾನ ಸಭೆ ಅಧಿವೇಶನ

ಬೆಂಗಳೂರು ಏಪ್ರಿಲ್ 16 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಅಧಿವೇಶನವು 2015 ರ ಏಪ್ರಿಲ್ 20 ರಂದು ಬೆಳಿಗ್ಗೆ 11–00 ಗಂಟೆಗೆ ಬೆಂಗಳೂರಿನ ವಿಧಾನ ಸೌಧದದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸೇರಲಿದೆ ಎಂದು ಕರ್ನಾಟಕ ವಿಧಾನ ಸಭೆ ಕಾರ್ಯದರ್ಶಿ ಶ್ರೀ ಪಿ. ಓಂಪ್ರಕಾಶ ಅವರು ತಿಳಿಸಿದ್ದಾರೆ.

ಬಾಬು/ಕೆಎಂ

# ಶ್ರೀಘ್ರಲಿಪಿಗಾರರ ಹುದ್ದೆಗೆ ನೇಮಕಾತಿ

ಬೆಂಗಳೂರು ಏಪ್ರಿಲ್ 16 (ಕರ್ನಾಟಕ ವಾರ್ತೆ)

ಚಿತ್ರದುರ್ಗ ಹಾಗೂ ಚಿತ್ರದುರ್ಗ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಖಾಲಿಯಿರುವ ಶ್ರೀಘ್ರಲಿಪಿಗಾರರ ಹುದ್ದೆಗೆ ಆರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿಮಾಡಿ ಮೇ 30 ರೊಳಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ ಇವರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು ಚಿತ್ರದುರ್ಗ ಜಿಲ್ಲೆ, ಅವರ ಕಚೇರಿಯನ್ನು ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್

# ಸೈನ್ಯಕ್ಕೆ ನೇಮಕಾತಿ

ಬೆಂಗಳೂರು ಏಪ್ರಿಲ್ 16 (ಕರ್ನಾಟಕ ವಾರ್ತೆ)

ಕೋಲಾರ ಜಿಲ್ಲೆಯ ಕೆ.ಜಿ.ಎಫ್. ನಗರದ ಬಿ.ಇ.ಎಂ.ಎಲ್. ಸ್ಪೋಟ್ಸ್ ಕಾಂಪ್ಲೆಕ್ಸ್‌ನಲ್ಲಿ ಏಪ್ರಿಲ್ 30 ರಿಂದ ಮೇ 3 ರವರೆಗೆ ಸೈನ್ಯಗೆ ನೇಮಕಾತಿ ರ್‍ಯಾಲಿ ನಡೆಯಲಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೋರಿದೆ.

ಹೆಚ್ಚಿನ ವಿವರಗಳಿಗೆ ನೇಮಕಾತಿ ಕಚೇರಿ ಕೇಂದ್ರಸ್ಥಾನ ನೇಮಕಾತಿ ವಲಯ, ಬೆಂಗಳೂರು – 560 025, ದೂರವಾಣಿ ಸಂಖ್ಯೆ 080 – 255–99290 ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್

## ಸಾಮಾಜಿಕ, ಶೈಕ್ಷಣಿಕ ಗಣತಿದಾರರಿಗೆ ಮುಖ್ಯಮಂತ್ರಿಗಳಿಂದ ಮಾಹಿತಿ

ಬೆಂಗಳೂರು, ಏಪ್ರಿಲ್ 16 (ಕರ್ನಾಟಕ ವಾರ್ತೆ)

ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ಕಾರ್ಯದಿಂದ ಜನರ ಸ್ಥಿತಿಗತಿಗಳ ಮಾಹಿತಿ ದೊರಕಲಿದ್ದು ಅದರನ್ವಯ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ಈ ಸಮೀಕ್ಷೆ ಸಹಕಾರಿಯಾಗಲಿದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ತಮ್ಮ ನಿವಾಸ ಕಾವೇರಿಯಲ್ಲಿ ಇಂದು ಗಣತಿದಾರರು ಹಾಗೂ ಮೇಲ್ವಿಚಾರಕರೂ ಆದ ಶ್ರೀ ಶಿವಕುಮಾರ್ ಅವರಿಗೆ ತಮ್ಮ ಕುಟುಂಬದ ಸಮಗ್ರ ಮಾಹಿತಿಯನ್ನು ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ ರಾಜ್ಯದಲ್ಲಿ 1.31 ಕೋಟಿ ಕುಟುಂಬಗಳಿದ್ದು 6.5 ಕೋಟಿ ಜನಸಂಖ್ಯೆ ಇದೆ. ಎಲ್ಲರೂ ತಮ್ಮ ಕುಟುಂಬದ ಮಾಹಿತಿಯನ್ನು ತಮ್ಮ ಮನೆ ಬಾಗಿಲಿಗೆ ಬರುವ ಗಣತಿದಾರರಿಗೆ ಒದಗಿಸಿ ಈ ಕಾರ್ಯಕ್ಕೆ ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಬಾಬು/ಕೆಪಿಪಿ/ಕೆಎಂ

## ಕರ್ನಾಟಕ ಶ್ರೀಮಂತ ಸಂಸ್ಕೃತಿಯನ್ನೊಳಗೊಂಡ ರಾಜ್ಯ

**–ನ್ಯಾಯಮೂರ್ತಿ ಮುಖರ್ಜಿ**

ಬೆಂಗಳೂರು, ಏ. 16 (ಕರ್ನಾಟಕ ವಾರ್ತೆ):

ನಾಲ್ವರು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಏಳು ಮಂದಿ ಜ್ಞಾನಪೀಠ ಪುರಸ್ಕೃತರನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ ಕರ್ನಾಟಕ ರಾಜ್ಯ ಶ್ರೀಮಂತ ಸಂಸ್ಕೃತಿಯನ್ನು ಒಳಗೊಂಡನಾಡಾಗಿದ್ದು, ಇಂತಹ ನಾಡಿನ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಲು ಸಂತಸವಾಗುತ್ತಿದೆ ಎಂದು ನ್ಯಾಯಮೂರ್ತಿ ಸುಬ್ರೋ ಕಮಲ್ ಮುಖರ್ಜಿ ಅವರು ಹರ್ಷ

ವ್ಯಕ್ತ ಪಡಿಸಿದರು. ಕರ್ನಾಟಕದ ಸಂಸ್ಕೃತಿ ಸಂಪ್ರದಾಯಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸುವುದಾಗಿ ತಿಳಿಸಿದರು.

ನಿನ್ನೆಯಷ್ಟೇ ರಾಜ್ಯ ಹೈಕೋರ್ಟ್‍ನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಿದ ನ್ಯಾಯಮೂರ್ತಿ ಸುಭ್ರೋ ಕಮಲ್ ಮುಖರ್ಜಿ ಅವರಿಗೆ ಇಂದು ಕರ್ನಾಟಕ ವಕೀಲರ ಪರಿಷತ್ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಾಂಪ್ರದಾಯಿಕವಾಗಿ ಸ್ವಾಗತ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಅವರು ಕರ್ನಾಟಕದ ಶ್ರವಣಬೆಳಗೊಳ, ಶೃಂಗೇರಿ ಶಾರದಾಪೀಠದ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಡಿ.ಎಚ್.ವಘೇಲ ಹಾಗೂ ಹೈಕೋರ್ಟ್‍ನ ಎಲ್ಲ ನ್ಯಾಯಾಧೀಶರುಗಳು, ಅಡ್ವೋಕೇಟ್ ಜನರಲ್ ರವಿವರ್ಮಕುಮಾರ್, ಹಾಗೂ ವಕೀಲರ ಪರಿಷತ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪಹೊ/ಎಂಆರ್‌ಎಂ/

# ಮಾವು ಬೆಳೆಗಾರರಿಗೆ ನೆರವು

**ಬೆಂಗಳೂರು, ಏಪ್ರಿಲ್ 16 (ಕರ್ನಾಟಕ ವಾರ್ತೆ)**

**ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ, ಲಾಲ್‌ಬಾಗ್, ಬೆಂಗಳೂರುರವರ ವತಿಯಿಂದ ಮಾವಿನ ಸಮಗ್ರ ಪೋಷಕಾಂಶ ನಿರ್ವಹಣೆ ಪರಿಕರವಾದ ಮ್ಯಾಂಗೊ ಸ್ಪೆಷಲ್' ಮತ್ತು ಮಾವಿನ ಸಮಗ್ರ ಕೀಟ ನಿರ್ವಹಣೆ ಪರಿಕರಗಳಾದ 'ಸೀಲರ್ ಕಮ್ ಹೀಲರ್' ಗಳನ್ನು ರಾಜ್ಯದ ಮಾವು ಬೆಳೆಗಾರರಿಗೆ ಶೇ 50 ರ ಪ್ರೋತ್ಸಾಹಧನ ರೂಪದಲ್ಲಿ ಆಯಾ ಜಿಲ್ಲಾ ಕೇಂದ್ರಗಳಲ್ಲಿ ಒದಗಿಸಲಾಗುತ್ತಿದೆ. ಅನುಮೋದಿತ ಸರಬರಾಜುದಾರರು ಮತ್ತು ದರಗಳ ವಿವರಗಳು ಇಂತಿವೆ ಮ್ಯಾಂಗೋ-ಸ್ಪೆಷಲ್ – ಅನ್ನು ಶ್ರೀ ಹೇಮಂತ್‌ಕುಮಾರ್, ಮೆ: ಪೆಸ್ಟ್ ಕಂಟ್ರೋಲ್ ಇಂಡಸ್ಟ್ರೀಸ್, ಬೆಂಗಳೂರು, ಮೊಬೈಲ್ ಸಂಖ್ಯೆ 9880755074 ರವರಿಂದ ಹಾಗೂ ಶ್ರೀ ನಾಗೇಂದ್ರ ಬಾಬು ಪಲ್ಲಾ, ಮೆ: ಬೆಂಗಳೂರು, ಮೊಬೈಲ್ ಸಂಖ್ಯೆ: 8792123827 ರವರಿಂದ ಪ್ರತಿ ಕೆ.ಜಿ. ಗೆ ರೂ 118/- ರಂತೆ ಖರೀದಿಸಬಹುದಾಗಿರುತ್ತೆ. ಸೀಲರ್ ಕಮ್ ಹೀಲರ್, ಅನ್ನು ಶ್ರೀ ಹೇಮಂತ್‌ಕುಮಾರ್ ಮೆ: ಪೆಸ್ಟ್ ಕಂಟ್ರೋಲ್ ಇಂಡಸ್ಟ್ರೀಸ್, ಬೆಂಗಳೂರು, ಮೊಬೈಲ್ ಸಂಖ್ಯೆ 9880755074 ರವರಿಂದ ಪ್ರತಿ ಕೆ. ಜಿ. ಗೆ ರೂ 110 ರಂತೆ ಖರೀದಿಸಬಹುದಾಗಿರುತ್ತದೆ. ಹಾಗೂ ಮಾವಿನ ಹಣ್ಣಿನ ನೊಣದ ಮೋಹಕ ಬಲೆ) ಅನ್ನು ಶ್ರೀ ಹೇಮಂತ್‌ಕುಮಾರ್, ಮೆ: ಪೆಸ್ಟ್ ಕಂಟ್ರೋಲ್ ಇಂಡಸ್ಟ್ರೀಸ್, ಬೆಂಗಳೂರು ಮೊಬೈಲ್ ಸಂಖ್ಯೆ 9880753074 ರವರಿಂದ ಪ್ರತಿ ಬಾಕ್ಸ್ ಮತ್ತು ಪ್ರತಿ ಹೈಯರ್‌ಗೆ ರೂ 22 ರಂತೆ ಹಾಗೂ ಶ್ರೀ ಡಿ.ವಿ. ರಮೇಶ್ ಮೆ: ಬಯೋ ಪೆಸ್ಟ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಮೊಬೈಲ್ ಸಂಖ್ಯೆ 8792123827 ರವರಿಂದ ಪ್ರತಿ ಬಾಕ್ಸ್ ಮತ್ತು ಪ್ರತಿ ಹೈಯರ್‌ಗೆ ರೂ 47.50 ರಂತೆ ಖರೀದಿಸಬಹುದಾಗಿರುತ್ತದೆ. ಮೇಲ್ಕಂಡ ಪರಿಕರಗಳನ್ನು ಸದುಪಯೋಗಪಡಿಸಿಕೊಳ್ಳಲು ಮಾವು ನಿಗಮವು ರಾಜ್ಯದ ಮಾವು ಬೆಳೆಗಾರರನ್ನು ಕೋರುತ್ತದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕು ಮತ್ತು ಜಿಲ್ಲೆಯ ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.**

**ಬಾಬು:ಜಿಪಿಆರ್.**